1	2	3
7	ಬಿಜಾಪುರ	2485 15
8	ಚಾಮರಾಜನಗರ	2455 36
9	ಚಿಕ್ಕಮಗಳೂರು	4519 00
10	ಚಿತ್ರದುರ್ಗ	3059 15
11	ಮಂಗಳೂರು	2037 72
12	ದಾವಣಗೆರೆ	2826 20
13	ಧಾರವಾಡ	3184 80
14	ಗದಗ	2462 00
15	ಗುಲ್ಬರ್ಗ	3659 65
16	ಹಾಸನ	4248 20
17	ಹಾವೇರಿ	4083 05
18	ಕೋಲಾರ	4002 00
19	ಕೊಪ್ಪಳ	2063 05
20	ಕೊಡಗು	2629 69
21	ಮಂಡ್ಯ	10927 00
22	ಮೈಸೂರು	4242 55
23	ರಾಯಚೂರು	2833 20
24	ಶಿವಮೊಗ್ಗ	4643 45
25	ತುಮಕೂರು	8213 48
26	ಉಡುಪಿ	1124 65
27	ಉತ್ತರ ಕನ್ನಡ	6555 69
	ಒಟ್ಟು	104034 00

ತೀರ್ಥಹಳ್ಳಿಯಲ್ಲಿ ನಿರ್ಮಿಸಲಾಗುತ್ತಿರುವ ಗೋಪಾಲಗೌಡ ರಂಗಮಂದಿರಕ್ಕೆ ಹೆಚ್ಚಿನ ಅನುದಾನ

103 (536) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿ ಗೋಪಾಲಗೌಡರ ಸ್ಮಾರಕಾರ್ಥ ತೀರ್ಥಹಳ್ಳಿಯಲ್ಲಿ ನಿರ್ಮಿಸಲಾಗುತ್ತಿರುವ ಬಯಲು ರಂಗ ಮಂದಿರಕ್ಕೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ ಎಷ್ಟು,

ಆ) ಸುಮಾರು ಐವತ್ತು ಲಕ್ಷಕ್ಕೂ ಹೆಚ್ಚು ತಗಲುವ, ನಾಡಿನ ಅಪರೂಪದ ನಾಯಕರಾದ ದಿ ಗೋಪಾಲಗೌಡರ ಸ್ಮಾರಕಾರ್ಥ ನಿರ್ಮಿಸುತ್ತಿರುವ ಈ ರಂಗ ಮಂದಿರಕ್ಕೆ ಸರ್ಕಾರ ಹೆಚ್ಚಿನ ಧನ ಸಹಾಯ ಒದಗಿಸುವುದೆ

ಇ) ಹಾಗಿದ್ದಲ್ಲಿ, ಎಷ್ಟು ಹಣ ಮತ್ತು ಯಾವಾಗ ಒದಗಿಸಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ) ಸರ್ಕಾರದಿಂದ ರೂ 1 50 ಲಕ್ಷಗಳು ಬಿಡುಗಡೆಯಾಗಿರುತ್ತದೆ

ಆ) ಬಯಲು ರಂಗಮಂದಿರದ ಯೋಜನೆಯಡಿ ನಿಯಮಾನುಸಾರ ರೂ 1 00 ಲಕ್ಷ ಮಾತ್ರ ನೆರವು ನೀಡಲು ಅವಕಾಶವಿರುತ್ತದೆ ಆದಾಗ್ಯೂ ಶ್ರೀ ಗೋಪಾಲಗೌಡರ ಸ್ಮರಣಾರ್ಥ ಈ ಬಯಲು ರಂಗಮಂದಿರಕ್ಕೆ ಈಗಾಗಲೇ ರೂ 1 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

ಇ) ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ಉದ್ದೇಶಿತ ಬಯಲು ರಂಗಮಂದಿರಕ್ಕೆ ರೂ 27 00 ಲಕ್ಷಗಳ ಬೇಡಿಕೆ ಸಲ್ಲಿಸಿದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ರೂ 1 00 ಲಕ್ಷ ಧನ ಸಹಾಯ ನೀಡಲಾಗಿದೆ ಮುಂದೆ ಆಯವ್ಯಯದ ಮಿತಿಯಲ್ಲಿ ಪರಿಶೀಲಿಸಿ ಧನ ಸಹಾಯ ನೀಡಲು ಕ್ರಮ ಕೈಗೊಳ್ಳಲಾಗುವುದು

ಸರ್ಕಾರಿ ಆಸ್ಪತ್ರೆಯಲ್ಲಿ ಸೇವಾ ಶುಲ್ಕ ವಿನಾಯಿತಿ

104 (537) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ಸೇವಾ ಶುಲ್ಕ ನಿಗಧಿಪಡಿಸಲಾಗಿದೆಯೆ ಹಾಗಿದ್ದಲ್ಲಿ ಶುಲ್ಕದ ವಿವರ ನೀಡುವುದು

ಆ) ಬಡತನ ರೇಖೆಗಿಂತ ಕೆಳಗಿರುವ ಹಾಗೂ ಬಿ ಪಿ ಎಲ್ ಪಟ್ಟಿಯಲ್ಲಿ ಸೇರ್ಪಡೆಯಾಗದಿರುವ ಬಡವರಿಗೆ ಆಸ್ಪತ್ರೆಗಳಲ್ಲಿ ಉಚಿತ ಸೇವಾ ನಿಗದಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸುವವರೆಗೆ ಶುಲ್ಕ ವಿನಾಯಿತಿ ನೀಡಲು ಸರ್ಕಾರ ಮುಂದಾಗುವುದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸೇವಾ ಶುಲ್ಕ ನಿಗಧಿಪಡಿಸಲಾಗಿದೆ ಸರ್ಕಾರ ಆದೇಶ ಸಂಖ್ಯೆ ಆಕುಕ 72 ಆಯೋಗ 01 ಬೆಂಗಳೂರು, ದಿನಾಂಕ 15–9–2003 (ಪುಸ್ತಕ ಲಗತ್ತಿಸಿದೆ)

ಆ) ಬಂದಿದೆ

ಇ) ಬಿ ಪಿ ಎಲ್ ಪಟ್ಟಿಯಲ್ಲಿ ಸೇರ್ಪಡೆಯಾದ ಬಡವರಿಗೆ ಆಸ್ಪತ್ರೆಯಲ್ಲಿ ಉಚಿತ ಸೇವ ನೀಡಲಾಗುತ್ತಿದೆ ಇನ್ನಿತರರು ಸಹ ಬಡವರೆಂದು ಕಂಡು ಬಂದಲ್ಲಿ ಅಂತಹವರಿಗೂ ಸಹ ಉಚಿತ ಚಿಕಿತ್ಸೆ ನೀಡಲು ಆಸ್ಪತ್ರೆಯ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ಸರ್ಕಾರಿ ಆಸ್ಪತ್ರೆಗಳಲ್ಲಿ ವಾರ್ಡ್ ಚಾರ್ಜ್ ಹಾಗೂ ಮತ್ತಿತರ ಚಾರ್ಜುಗಳ ದರಗಳನ್ನು ಪರಿಷ್ಕರಿಸುವ ಬಗ್ಗೆ

ಓದಲಾಗಿದೆ 1) ಸರ್ಕಾರಿ ಆದೇಶ ಸಂಖ್ಯೆ ಆಕು ಕ 126 ಎಫ್ಎಂಎಂ 86 ದಿನಾಂಕ 10–08–1988

2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇದರ ಪತ್ರ ಸಂಖ್ಯೆ ಲೆಪವಿ (2) ಆರೋಗ್ಯ 1 2003–04